# ಕರ್ನಾಟಕ ವಿಧಾನಸಭೆ

# ಅರ್ಜಿಗಳ ಸಮಿತಿಯ ರಚನೆ, ಕಾರ್ಯಗಳು

# ಮತ್ತು ಕರ್ತವ್ಯಗಳ ವಿವರಗಳು

## (31ನೇ ಮಾರ್ಚ್, 2024ರಲ್ಲಿದ್ದಂತೆ)

**(i) ಸಮಿತಿ ರಚನೆ:**

ವಿಧಾನಸಭೆಯ ಅರ್ಜಿಗಳ ಸಮಿತಿಯು, ಮಾನ್ಯ ಉಪ ಸಭಾಧ್ಯಕ್ಷರು ಒಳಗೊಂಡಂತೆ ಹಾಗೂ ಮಾನ್ಯ ಸಭಾಧ್ಯಕ್ಷರು ನಾಮನಿರ್ದೇಶಿಸಿದ 15 ಸದಸ್ಯರನ್ನು ಒಳಗೊಂಡಿರುತ್ತದೆ. ಉಪ ಸಭಾಧ್ಯಕ್ಷರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಯಾರೇ ಮಂತ್ರಿಯು ಸಮಿತಿಯ ಸದಸ್ಯರಾಗಿ ಚುನಾಯಿತರಾಗತಕ್ಕುದಲ್ಲ ಮತ್ತು ಸಮಿತಿಗೆ ಚುನಾಯಿತರಾದ ಮೇಲೆ ಯಾರೇ ಸದಸ್ಯರು ಮಂತ್ರಿಯಾಗಿ ನೇಮಕಗೊಂಡರೆ ಅವರು ಆ ರೀತಿ ನೇಮಕವಾದ ದಿನಾಂಕದಿಂದ ಸಮಿತಿಯ ಸದಸ್ಯರಾಗಿರುವುದು ನಿಂತುಹೋಗತಕ್ಕದ್ದು.

**ಸಮಿತಿಯ ಅಧಿಕಾರಾವಧಿ:**

ಸಮಿತಿಯು ಒಂದು ವರ್ಷಕ್ಕೆ ಮೀರದ ಅವಧಿಯವರೆಗೆ ಅಧಿಕಾರದಲ್ಲಿರತಕ್ಕದು.

**ಗಣಪೂರ್ತಿ:**

ಸಮಿತಿಯ ಉಪವೇಶನ ನಡೆಯಲು ಕನಿಷ್ಟಪಕ್ಷ ಸಮಿತಿಯ ಸದಸ್ಯರ ಒಟ್ಟು ಸಂಖ್ಯೆಯ ಸರಿ ಸುಮಾರು ಮೂರನೆಯ ಒಂದು ಭಾಗವಾಗಿರಬೇಕು.

**ಸಮಿತಿಯ ಪ್ರಕಾರ್ಯಗಳು:**

1. ಸಮಿತಿಗೆ ಬಂದ ಪ್ರತಿಯೊಂದು ಅರ್ಜಿಯನ್ನು ಸಮಿತಿಯು ಪರಿಶೀಲಿಸತಕ್ಕದ್ದು ಮತ್ತು ಅರ್ಜಿಯು ವಿಧಾನಸಭೆಯ ಅರ್ಜಿಗಳ ಸಮಿತಿಯ ಆಂತರಿಕ ಕಾರ್ಯನಿರ್ವಹಣಾ ನಿಯಮಗಳಿಗನುಸಾರವಾಗಿದ್ದರೆ, ಅದನ್ನು ಸದಸ್ಯರಿಗೆ ಕಳುಹಿಸಿಕೊಡಬೇಕೆಂದು ಸಮಿತಿಯು ನಿರ್ದೇಶಿಸಬಹುದು. ಅರ್ಜಿಯನ್ನು ಕಳುಹಿಸಬೇಕೆಂದು ನಿರ್ದೇಶಿಸದೇ ಇದ್ದ ಪಕ್ಷದಲ್ಲಿ, ವಿಧಾನಸಭಾಧ್ಯಕ್ಷರು ಯಾವುದೇ ಕಾಲದಲ್ಲಿ ಅರ್ಜಿಯನ್ನು ಎಲ್ಲರಿಗೂ ಕಳುಹಿಸಿಕೊಡಬೇಕೆಂದು ನಿರ್ದೇಶಿಸಬಹುದು.

2. ಸಂದರ್ಭಾನುಸಾರ ಸಮಿತಿ ಅಥವಾ ವಿಧಾನ ಸಭಾಧ್ಯಕ್ಷರು ನಿರ್ದೇಶಿಸಬಹುದಾದಂತೆ ಅಭಿಪ್ರಾಯ ಪಡೆಯಲು ಸದಸ್ಯರುಗಳಿಗೆ ಕಳುಹಿಸಿಕೊಡುವ ಅರ್ಜಿಯು ಪೂರ್ಣವಾಗಿ, ಸವಿಸ್ತಾರವಾಗಿ ಅಥವಾ ಸಾರಾಂಶ ರೂಪದಲ್ಲಿ ಇರತಕ್ಕದ್ದು.

3. ಸಮಿತಿಗೆ ಬಂದಂಥ ಅರ್ಜಿಗಳಲ್ಲಿ ಮಾಡಲಾಗಿರುವ ನಿರ್ದಿಷ್ಟ ದೂರುಗಳನ್ನು ಅವುಗಳ ಸಂಬಂಧದಲ್ಲಿ ಸಮಿತಿಯು ಸೂಕ್ತವೆಂದು ಭಾವಿಸುವಂಥ ಸಾಕ್ಷ್ಯಗಳನ್ನು ತೆಗೆದುಕೊಂಡ ತರುವಾಯ, ಸದನಕ್ಕೆ ತಿಳಿಸುವುದು ಹಾಗೂ ಪರಿಶೀಲನೆಯಲ್ಲಿರುವ ವಿಷಯಕ್ಕೆ ನಿರ್ದಿಷ್ಟವಾಗಿ ಅನ್ವಯವಾಗುವ ಪರಿಹಾರ ಕ್ರಮಗಳನ್ನು ಸೂಚಿಸುವುದು ಅಥವಾ ಮುಂದೆ ಅಂತಹ ದೂರುಗಳು ಬರದಂತೆ ಸಲಹೆಗಳನ್ನು ನೀಡುವುದು ಸಹ ಸಮಿತಿಯ ಕರ್ತವ್ಯವಾಗಿರತಕ್ಕದ್ದು.

## (ii) ಅಧಿಕಾರಿಗಳ ಮತ್ತು ನೌಕರರ ಅಧಿಕಾರಗಳು ಹಾಗೂ ಕರ್ತವ್ಯಗಳು:

| ಕ್ರ.ಸಂ. | ಪದನಾಮ | ಅಧಿಕಾರಗಳು/ಕರ್ತವ್ಯಗಳು |
|---|---|---|
| 1. | ಕಾರ್ಯದರ್ಶಿ | ಕರ್ನಾಟಕ ವಿಧಾನಸಭೆ ಸಚಿವಾಲಯದ ಮುಖ್ಯಸ್ಥರು |
| 2. | ಜಂಟಿ ಕಾರ್ಯದರ್ಶಿ | ಸಮಿತಿಯ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ ಅವರಿಂದ ಬರುವ ಕಡತಗಳನ್ನು ಪರಿಶೀಲಿಸಿ ಅಗತ್ಯ ಶಿಫಾರಸ್ಸುಗಳೊಂದಿಗೆ ಕಾರ್ಯದರ್ಶಿಯವರಿಗೆ ಪ್ರಸ್ತಾವನೆ ಸಲ್ಲಿಸುವುದು. ಸಮಿತಿಯ ಅಧ್ಯಯನ ಪ್ರವಾಸಗಳ ವ್ಯವಸ್ಥೆ ಮಾಡುವುದು. ಸಮಿತಿಯ ವರದಿಯನ್ನು ಅಂತಿಮಗೊಳಿಸಿ ಸಮಿತಿಯ ಮುಂದೆ ಮಂಡಿಸುವುದು ಹಾಗೂ ಪ್ರಮುಖ ವಿಷಯಗಳನ್ನು ಕಾರ್ಯದರ್ಶಿಯವರೊಂದಿಗೆ ಚರ್ಚಿಸಿ ವರದಿ ಮಾಡುವುದು. |
| 3. | ಉಪ ಕಾರ್ಯದರ್ಶಿ | ಸಮಿತಿಯ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಶಾಖಾಧಿಕಾರಿ/ಅಧೀನಕಾರ್ಯದರ್ಶಿ ಮಂಡಿಸುವ ಕಡತಗಳನ್ನು ಪರಿಶೀಲಿಸಿ, ಸೂಕ್ತ ಶಿಫಾರಸ್ಸುಗಳೊಂದಿಗೆ ಜಂಟಿ ಕಾರ್ಯದರ್ಶಿಯವರಿಗೆ ಸಲ್ಲಿಸುವುದು, ಸಮಿತಿಯ ಅಧ್ಯಯನ ಪ್ರವಾಸಗಳ ವ್ಯವಸ್ಥೆ ಮಾಡುವುದು ಹಾಗೂ ಸಮಿತಿಯ ವರದಿಯನ್ನು ಅಂತಿಮಗೊಳಿಸಿ ಅನುಮೋದನೆಗಾಗಿ ಮೇಲಾಧಿಕಾರಿಗೆ ಸಲ್ಲಿಸುವುದು ಮತ್ತು ಹೊರ ರಾಜ್ಯಗಳಿಂದ ಬರುವ ಸೋದರ ಸಮಿತಿಗೆ ಅಗತ್ಯ ವ್ಯವಸ್ಥೆ ಮಾಡುವುದು. |

| | | |
|---|---|---|
| 4. | ಅಧೀನ ಕಾರ್ಯದರ್ಶಿ | ಶಾಖೆಯ ಸಂಪೂರ್ಣ ಮೇಲ್ವಿಚಾರಣಾ ಅಧಿಕಾರಿಯಾಗಿ, ಶಾಖಾಧಿಕಾರಿ ಹಾಗೂ ವಿಷಯ ನಿರ್ವಾಹಕರು ಮಂಡಿಸುವ ಕಡತಗಳನ್ನು ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ಸಮಿತಿ ಸಭೆಯ ಸೂಚನಾ ಪತ್ರ ಹೊರಡಿಸುವುದು; ಸಮಿತಿ ಸಭೆಯ ನಡವಳಿಯ ಸಂಕ್ಷಿಪ್ತ ಟಿಪ್ಪಣಿ ಕರಡು ವರದಿಯನ್ನು ತಯಾರಿಸಿ, ಅನುಮೋದನೆಗೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳು ವಹಿಸುವ ಇತರೆ ಕೆಲಸ ಕಾರ್ಯಗಳು. |
| 5. | ಶಾಖಾಧಿಕಾರಿ | ಶಾಖೆಯ ಮೇಲ್ವಿಚಾರಣಾ ಅಧಿಕಾರಿಯಾಗಿ, ವಿಷಯ ನಿರ್ವಾಹಕರು ಮಂಡಿಸುವ ಕಡತಗಳನ್ನು ಪರಿಶೀಲಿಸುವುದು, ಸಮಿತಿ ಸಭೆಯ ಕರಡು ವರದಿ ಹಾಗೂ ಸಂಕ್ಷಿಪ್ತ ಟಿಪ್ಪಣಿ ತಯಾರಿಸುವಲ್ಲಿ ಅಧೀನ ಕಾರ್ಯದರ್ಶಿರವರಿಗೆ ನೆರವಾಗುವುದು ಹಾಗೂ ಅಧೀನ ಕಾರ್ಯದರ್ಶಿ/ಉಪ ಕಾರ್ಯದರ್ಶಿಗಳು ವಹಿಸುವ ಇತರೆ ಕೆಲಸ ಕಾರ್ಯಗಳು. |
| 6. | ಹಿರಿಯ ಸಹಾಯಕರು ಹಾಗೂ ಸಹಾಯಕರು | ಕರ್ನಾಟಕ ವಿಧಾನಸಭೆ ಸಚಿವಾಲಯದ ಕೈಪಿಡಿಯಲ್ಲಿ ನಿಗದಿಪಡಿಸಿದಂತೆ ಹಾಗೂ ಶಾಖೆಯಿಂದ ಹೊರಡಿಸಲಾದ ಕಾರ್ಯ ಹಂಚಿಕೆಯ ರೀತ್ಯಾ ಕಾರ್ಯನಿರ್ವಹಿಸುವುದು. |
| 7. | ಕಿರಿಯ ಸಹಾಯಕರು | ಶಾಖೆಗೆ ಸಂಬಂಧಿಸಿದ ದಿನಚರಿ ಕೆಲಸ ಮತ್ತು ಸಂಘಟನೆ, ಚಲನ-ವಲನ ಹಾಗೂ ಸ್ವೀಕೃತಿ/ಕಡತಗಳನ್ನು ಶಾಖೆಯಲ್ಲಿ ವಿತರಿಸುವುದು ಹಾಗೂ ಶಾಖೆಯಿಂದ ಹೊರಡಿಸಲಾದ ಕಾರ್ಯಹಂಚಿಕೆಯ ರೀತ್ಯಾ ಕಾರ್ಯನಿರ್ವಹಿಸುವುದು. |
| 8. | ಬೆರಳಚ್ಚುಗಾರರು | ಶಾಖೆಗೆ ಸಂಬಂಧಿಸಿದ ಎಲ್ಲಾ ಬೆರಳಚ್ಚು ಕಾರ್ಯಗಳನ್ನು ಗಣಕಯಂತ್ರದಲ್ಲಿ ನಿರ್ವಹಿಸುವುದು ಹಾಗೂ ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ ವಹಿಸಿದ ಬೆರಳಚ್ಚು ಕೆಲಸಗಳನ್ನು ನಿರ್ವಹಿಸುವುದು ಹಾಗೂ ಶಾಖೆಯಿಂದ ಹೊರಡಿಸಲಾದ ಕಾರ್ಯಹಂಚಿಕೆಯ ರೀತ್ಯಾ ಕಾರ್ಯನಿರ್ವಹಿಸುವುದು. |
| 9. | ಜಮೇದಾರ್/ ದಲಾಯತ್ | ಕಛೇರಿಯನ್ನು ಅಚ್ಚುಕಟ್ಟಾಗಿ ಮತ್ತು ಶುಚಿಯಾಗಿ ಇಡುವುದು. ಕಡತಗಳನ್ನು, ಸ್ವೀಕೃತಿಗಳನ್ನು ವಿಧಾನ ಸಭೆಯ/ವಿಧಾನ ಪರಿಷತ್ತಿನ ಶಾಖೆಗಳಿಗೆ ಹಾಗೂ ಕರ್ನಾಟಕ ಸರ್ಕಾರದ ಸಚಿವಾಲಯದ ಇತರೆ ಇಲಾಖೆಗಳಿಗೆ ತಲುಪಿಸುವುದು. ಪುಸ್ತಕ, ವರದಿ, ನಡವಳಿ ಹಾಗೂ ಇತರೆ ಪುಸ್ತಕಗಳನ್ನು ತೆಗೆದುಕೊಡುವುದು, ಜೋಡಿಸುವುದು ಹಾಗೂ ಕ್ರಮಬದ್ಧವಾಗಿಡುವುದು, ಶಾಖೆಯ ಮೇಲಾಧಿಕಾರಿಗಳು ಮತ್ತು ಶಾಖೆಯ ಇತರೆ ನೌಕರರು ವಹಿಸುವ ಕೆಲಸಗಳನ್ನು ನಿರ್ವಹಿಸುವುದು. |

## (iii) ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ:

| ಕ್ರ.ಸಂ. | ಪದನಾಮ | ಕಾರ್ಯ ವಿಧಾನ |
|---|---|---|
| 1. | ಕಿರಿಯ ಸಹಾಯಕ/ ವಿಷಯ ನಿರ್ವಾಹಕ | ಸಮಿತಿ ಸಭೆಗೆ ಸಂಬಂಧಿಸಿದಂತೆ ಕಾರ್ಯಸೂಚಿ/ ಸಭೆಯ ಕಾರ್ಯಕಲಾಪಗಳ ಪಟ್ಟಿ (ಅಜೆಂಡಾ)/ ಸಮಿತಿ ಸಭೆಯ ಬಗ್ಗೆ ಸದಸ್ಯರುಗಳಿಗೆ ದೂರವಾಣಿಯಲ್ಲಿ ನೆನಪು ಮಾಡುವುದು/ಸದಸ್ಯರ ಹಾಜರಾತಿ ಪಡೆದು, ಲೆಕ್ಕಪತ್ರಗಳ ಶಾಖೆಗೆ ರವಾನಿಸುವುದು/ಲಘು ಉಪಹಾರ ವ್ಯವಸ್ಥೆ ಹಾಗೂ ವೆಚ್ಚಗಳ ಬಿಲ್ಲುಗಳ ಮರುಪಾವತಿಯ ಕಾರ್ಯಗಳು/ಸಿಬ್ಬಂದಿಗಳ ಸಾಂದರ್ಭಿಕ ರಜೆ ನಿರ್ವಹಣೆ/ ಸಮಿತಿ ಸಭೆಗಳಿಗೆ ಕೊಠಡಿ ಕಾಯ್ದಿರಿಸುವುದು/ ಸಮಿತಿಯ ವರದಿಗಳಲ್ಲಿನ ಶಿಫಾರಸ್ಸುಗಳಿಗೆ ಇಲಾಖೆಯು ಕೈಗೊಂಡಿರುವ ಅನುಷ್ಠಾನ ಕ್ರಮದ ಬಗ್ಗೆ ಅನುಸರಣಾ ಟಿಪ್ಪಣಿಯನ್ನು ನೀಡುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರಗಳನ್ನು ಬರೆಯುವುದು ಹಾಗೂ ಹಿಂದಿನ ವರದಿಗಳ ಶಿಫಾರಸ್ಸುಗಳ ತಃಖ್ತೆಯನ್ನು ತಯಾರಿಸಲು ಸಹಕರಿಸುವುದು. |
| 2. | ಸಹಾಯಕ/ ವಿಷಯ ನಿರ್ವಾಹಕ | ಸಮಿತಿ ಸಭೆಗೆ ಸಂಬಂಧಿಸಿದಂತೆ ಸಭೆಯ ಸೂಚನಾ ಪತ್ರ ತಯಾರಿಸುವುದು, ಗಣಕ ಕೇಂದ್ರ ಹಾಗೂ ಇನ್ನಿತರೆ ಶಾಖೆಗಳಿಗೆ(ಜೆಪಿಐ) ಒದಗಿಸುವುದು/ಸಮಿತಿಯ ವರದಿಗಳಲ್ಲಿನ ಶಿಫಾರಸ್ಸುಗಳಿಗೆ ಇಲಾಖೆಯು ಕೈಗೊಂಡಿರುವ ಅನುಷ್ಠಾನ ಕ್ರಮದ ಬಗ್ಗೆ ಅನುಸರಣಾ ಟಿಪ್ಪಣಿಯನ್ನು ನೀಡುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರಗಳನ್ನು ಬರೆಯುವುದು ಹಾಗೂ ಹಿಂದಿನ ವರದಿಗಳ ಶಿಫಾರಸ್ಸುಗಳ ತಃಖ್ತೆಯನ್ನು ತಯಾರಿಸಲು ಸಹಕರಿ ಸುವುದು/ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮಗಳು (ಆರ್.ಟಿ.ಐ) ಅರ್ಜಿಗಳ ಸಂಬಂಧದ ಕಾರ್ಯ ನಿರ್ವಹಿಸುವುದು/ ವರದಿಗಳನ್ನು ಸ್ಕ್ಯಾನಿಂಗ್/ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸಹಕರಿಸುವುದು/ ಮುದ್ರಣಕ್ಕೆ ಸಂಬಂಧಿಸಿದ ಕಾರ್ಯ/ವಿಧಾನಸೌಧದ ಆವರಣದ ಹೊರಗೆ ನಡೆಯಲಿರುವ ಸಭೆಗಳಿಗೆ ಮಾನ್ಯ ಸಭಾಧ್ಯಕ್ಷರ ಅನುಮೋದನೆ ಪಡೆಯುವ ಕಾರ್ಯಗಳನ್ನು ನಿರ್ವಹಿಸುವುದು. |

| | | |
|---|---|---|
| 3. | ಹಿರಿಯ ಸಹಾಯಕರು | ಸಮಿತಿ ಸಭೆಗೆ ಸಂಬಂಧಿಸಿದಂತೆ ಅರೆ ಸರ್ಕಾರಿ ಪತ್ರ ತಯಾರಿಸುವುದು/ಸಮಿತಿಯು ಬೇರೆ ರಾಜ್ಯಗಳಲ್ಲಿ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅಧ್ಯಯನ ಪ್ರವಾಸ ಕೈಗೊಂಡಾಗ ನಿರ್ವಹಿಸಬೇಕಾದ ಪತ್ರ ವ್ಯವಹಾರ ಕಾರ್ಯಗಳು/ಸಮಿತಿ ಸಭೆಗಳ ಕರಡು ವರದಿಗೆ ಸಂಬಂಧಿಸಿದಂತೆ ಸಂಕ್ಷಿಪ್ತ ಟಿಪ್ಪಣಿಯನ್ನು ಸಿದ್ಧಪಡಿಸುವಲ್ಲಿ ಶಾಖಾಧಿಕಾರಿ / ಅಧೀನ ಕಾರ್ಯದರ್ಶಿಯವರಿಗೆ ಸಹಕರಿಸುವುದು. |
| 4. | ಶಾಖಾಧಿಕಾರಿ | ವಿಷಯ ನಿರ್ವಾಹಕರು ಸಲ್ಲಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿ, ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ತಿಳಿಸಿ ಅಧೀನ ಕಾರ್ಯದರ್ಶಿಯವರಿಗೆ ಕಡತವನ್ನು ಮಂಡಿಸುವುದು. |
| 5. | ಅಧೀನ ಕಾರ್ಯದರ್ಶಿ | ಶಾಖಾಧಿಕಾರಿ ಹಾಗೂ ವಿಷಯ ನಿರ್ವಾಹಕರು ಸಲ್ಲಿಸುವ ಕಡತಗಳನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯದೊಂದಿಗೆ ಮೇಲಾಧಿಕಾರಿಗಳಿಗೆ ಸಲ್ಲಿಸುವುದು. |
| 6. | ಉಪ ಕಾರ್ಯದರ್ಶಿ | ಶಾಖೆಗಳಿಂದ ಮಂಡಿಸಲಾದ ಕಡತಗಳಲ್ಲಿನ ಪ್ರಸ್ತಾವನೆ ಕುರಿತು ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಲು ಶಿಫಾರಸ್ಸುಗಳೊಂದಿಗೆ ಕಡತವನ್ನು ಸಲ್ಲಿಸುವುದು ಹಾಗೂ ವಿಷಯಗಳನ್ನು ಕಾರ್ಯದರ್ಶಿಯವರಿಗೆ ವರದಿ ಮಾಡುವುದು. |
| 7. | ಜಂಟಿ ಕಾರ್ಯದರ್ಶಿ | ವಿಧಾನಸಭೆಯ ಅರ್ಜಿಗಳ ಸಮಿತಿಯ ಸಂಪೂರ್ಣ ಕಾರ್ಯನಿರ್ವಹಣೆ, ಕಡತದಲ್ಲಿ ಅಳವಡಿಸಬಹುದಾದ ಹಾಗೂ ಅನುಕ್ರಮದ ಕುರಿತು ಮುಂದಿನ ಕ್ರಮಕ್ಕಾಗಿ ಕಾರ್ಯದರ್ಶಿಯವರಿಗೆ ಸಲ್ಲಿಸುವುದು. |

## (iv) ಶಾಖೆಯ ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು:

| ಕ್ರ.ಸಂ. | ಹುದ್ದೆ | ಕಾರ್ಯನಿರ್ವಹಣಾ ಸೂತ್ರಗಳು |
|---|---|---|
| 1. | ದಲಾಯತ್/ಜಮೇದಾರ್ | ಶಾಖೆಯಿಂದ ವಹಿಸಲಾಗುವ ಕೆಲಸಕಾರ್ಯಗಳನ್ನು ಆಯಾಯ ದಿನದಂದೇ ನಿರ್ವಹಿಸುವುದು. |
| 2. | ಕಿರಿಯ ಸಹಾಯಕರು/<br>ಸಹಾಯಕರು/<br>ಹಿರಿಯ ಸಹಾಯಕರು | ಕಡತಗಳನ್ನು/ಸ್ವೀಕೃತಿಗಳನ್ನು ಮಂಡಿಸುವುದು ಹಾಗೂ ಅವರಿಗೆ ವಹಿಸಲಾಗುವ ಕೆಲಸಕಾರ್ಯಗಳನ್ನು ಆಯಾಯ ದಿನದಂದೇ ನಿರ್ವಹಿಸುವುದು. |

| | | |
|---|---|---|
| 3. | ಬೆರಳಚ್ಚುಗಾರರು | ಶಾಖೆಗೆ ಸಂಬಂಧಿಸಿದ ಎಲ್ಲಾ ಬೆರಳಚ್ಚು ಕಾರ್ಯಗಳನ್ನು ಗಣಕ ಯಂತ್ರದಲ್ಲಿ ನಿರ್ವಹಿಸುವುದು ಹಾಗೂ ಅಧೀನ ಕಾರ್ಯದರ್ಶಿ/ಶಾಖಾಧಿಕಾರಿಗಳು ವಹಿಸಿದ ಬೆರಳಚ್ಚು ಕೆಲಸಗಳನ್ನು ನಿರ್ವಹಿಸುವುದು ಹಾಗೂ ಶಾಖೆಯಿಂದ ಹೊರಡಿಸಲಾದ ಕಾರ್ಯಹಂಚಿಕೆಯ ರೀತ್ಯಾ ಕಾರ್ಯನಿರ್ವಹಿಸುವುದು. |
| 4. | ಶಾಖಾಧಿಕಾರಿ/<br>ಅಧೀನ ಕಾರ್ಯದರ್ಶಿ/<br>ಉಪ ಕಾರ್ಯದರ್ಶಿ/<br>ಮತ್ತು ಜಂಟಿ ಕಾರ್ಯದರ್ಶಿ | ಆದ್ಯತೆಯ ಮೇಲೆ ನಿಗದಿತ ಅವಧಿಯಲ್ಲಿ ಕೆಲಸಕಾರ್ಯಗಳನ್ನು ನಿರ್ವಹಿಸುವುದು. |

## (v) ಶಾಖೆಯ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು:

1. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳು.
2. ಕರ್ನಾಟಕ ವಿಧಾನಸಭೆಯ ಅರ್ಜಿಗಳ ಸಮಿತಿಯ ಆಂತರಿಕ ಕಾರ್ಯನಿರ್ವಹಣಾ ನಿಯಮಗಳು.
3. ಕರ್ನಾಟಕ ವಿಧಾನಸಭೆ ಸಚಿವಾಲಯ ಕಛೇರಿ ಕೈಪಿಡಿ ಭಾಗ-1 ಮತ್ತು ಭಾಗ-2.
4. ಸದನದಲ್ಲಿ ಮಂಡಿಸಿರುವ ಸಮಿತಿಯ ವರದಿಗಳು
5. ಸದನದಲ್ಲಿ ಮಂಡಿಸಿರುವ ವರದಿಯಲ್ಲಿನ ಶಿಫಾರಸ್ಸುಗಳಿಗೆ ಇಲಾಖೆಗಳಿಂದ ಬಂದಿರುವ ಅನುಸರಣಾ/ಅನುಪಾಲನಾ ವರದಿ
6. ಮಾಹಿತಿ ಹಕ್ಕು ಅಧಿನಿಯಮ-2005ರ ನಿಯಮಗಳು.

## (vi) ಶಾಖೆಯು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ:

ಅರ್ಜಿಗಳ ಕುರಿತು ನಿರ್ವಹಿಸುತ್ತಿರುವ ಕಡತಗಳ ಸಂಖ್ಯೆ ಹಾಗೂ ವಿಷಯವನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.

## (vii) ಶಾಖೆಯ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥಹ ಯಾವುದೇ ವ್ಯವಸ್ಥೆಯ ವಿವರಗಳು:

ಅನ್ವಯಿಸುವುದಿಲ್ಲ.

**(viii)** ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರೆ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಎಂಬುದರ ವಿವರ ಪಟ್ಟಿ:

ಅನ್ವಯಿಸುವುದಿಲ್ಲ.

## (ix) ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ (Directory)

| ಕ್ರ.ಸಂ. | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 01. | ಶ್ರೀಮತಿ ಎಂ.ಕೆ. ವಿಶಾಲಾಕ್ಷಿ | ಕಾರ್ಯದರ್ಶಿ |
| 02. | ಶ್ರೀಮತಿ ಎಂ.ಮಂಜುಳ | ಜಂಟಿ ಕಾರ್ಯದರ್ಶಿ |
| 03. | ಶ್ರೀಮತಿ ವಸುಂದರದೇವಿ ಸಿ. | ಉಪ ಕಾರ್ಯದರ್ಶಿ |
| 04. | ಶ್ರೀಮತಿ ಶೋಭ ಎಸ್. ನಾಯಕ್ | ಅಧೀನ ಕಾರ್ಯದರ್ಶಿ |
| 05. | ಶ್ರೀ ಸುರೇಶ್ ಮಲ್ಲಳ್ಳಿ | ಶಾಖಾಧಿಕಾರಿ |
| 06. | ಶ್ರೀ ಶಿವರಾಮು | ಹಿರಿಯ ಸಹಾಯಕ |
| 07. | ಶ್ರೀ ರಾಜಗೋಪಾಲ | ಕಿರಿಯ ಸಹಾಯಕ |
| 08. | ಶ್ರೀ ಬಿ.ಎನ್.ಪ್ರಶಾಂತ್ ಕುಮಾರ್ | ಕಿರಿಯ ಸಹಾಯಕ |
| 09. | ಶ್ರೀಮತಿ ಎನ್.ಜೆ.ಪ್ರತಿಮ | ಬೆರಳಚ್ಚುಗಾರರು |
| 10. | ಶ್ರೀಮತಿ ಮಾಲತಿ ಆರ್. | ಬೆರಳಚ್ಚುಗಾರರು |
| 11. | ಶ್ರೀ ಕಾಶಿ.ವೈ.ಕೆ. | ದಲಾಯತ್ |
| 12. | ಶ್ರೀಮತಿ ಅನಿತ | ದಲಾಯತ್ |

**(x)** ವಿಧಾನಸಭೆ ಸಚಿವಾಲಯದ ವಿನಿಯಮಗಳಲ್ಲಿ ಉಪಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಸಂಬಳ:

| ಕ್ರ. ಸಂ. | ಅಧಿಕಾರಿಗಳ ಹೆಸರು | ಪದನಾಮ | ವೇತನ (ರೂ.ಗಳಲ್ಲಿ) |
|---|---|---|---|
| 0. | ಶ್ರೀಮತಿ ಎಂ.ಮಂಜುಳ | ಜಂಟಿ ಕಾರ್ಯದರ್ಶಿ | 1.71.183-00 |
| 02. | ಶ್ರೀಮತಿ ವಸುಂದರದೇವಿ ಸಿ. | ಉಪ ಕಾರ್ಯದರ್ಶಿ | 1,39,199-00 |
| 03. | ಶ್ರೀಮತಿ ಶೋಭ ಎಸ್.ನಾಯಕ್ | ಅಧೀನ ಕಾರ್ಯದರ್ಶಿ | 1,02,698-00 |
| 04. | ಶ್ರೀ ಸುರೇಶ್ ಮಲ್ಲಳ್ಳಿ | ಶಾಖಾಧಿಕಾರಿ | 84,179-00 |
| 05. | ಶ್ರೀ ಶಿವರಾಮು | ಹಿರಿಯ ಸಹಾಯಕ | 88.598-00 |
| 06. | ಶ್ರೀ ರಾಜಗೋಪಾಲ | ಕಿರಿಯ ಸಹಾಯಕ | 49.700-00 |
| 07. | ಶ್ರೀ ಜಿ.ಎನ್.ಪ್ರಶಾಂತ್ ಕುಮಾರ್ | ಕಿರಿಯ ಸಹಾಯಕ | 50,501-00 |
| 08. | ಶ್ರೀಮತಿ ಎನ್.ಜೆ.ಪ್ರತಿಮ | ಬೆರಳಚ್ಚುಗಾರರು | 43,741-00 |
| 09. | ಶ್ರೀಮತಿ ಮಾಲತಿ ಆರ್. | ಬೆರಳಚ್ಚುಗಾರರು | 39,167-00 |
| 10. | ಶ್ರೀ ಕಾಶಿ.ವ್ಯ.ಕೆ. | ದಲಾಯತ್ | 41.364-00 |
| 11. | ಶ್ರೀಮತಿ ಅನಿತ | ದಲಾಯತ್ | 42.353-00 |

**(xi)** ಎಲ್ಲಾ ಯೋಜನೆಗಳ ವಿವರಗಳನ್ನು ರಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ರಚಿಸಿ; ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ:

ಅನ್ವಯಿಸುವುದಿಲ್ಲ

**(xii)** ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು:

ಅನ್ವಯಿಸುವುದಿಲ್ಲ

**(xiii)**ಅದು ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು:

ಅನ್ವಯಿಸುವುದಿಲ್ಲ

**(xiv)** ಶಾಖೆಯಲ್ಲಿ ಲಭ್ಯವಿರುವ ಅಥವಾ ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರಗಳು:

ಕರ್ನಾಟಕ ವಿಧಾನಸಭೆ ಸಚಿವಾಲಯದ ಅಂತರ್ಜಾಲದಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಹಾಗೂ ಇತರೆ ಮುಖ್ಯವಾದ ಮಾಹಿತಿಗಳನ್ನು ಸಹ ಅಳವಡಿಸಲಾಗಿದೆ:

**ವೆಬ್ ವಿಳಾಸ:** http://www/kla kar.nic.in

1. ಕರ್ನಾಟಕ ವಿಧಾನಸಭೆಯ ಅರ್ಜಿಗಳ ಸಮಿತಿಯ ಮಾಹಿತಿಗಳು.
2. ಕರ್ನಾಟಕ ವಿಧಾನಸಭೆಯ ಸದನದಲ್ಲಿ ಮಂಡಿಸಲಾಗಿರುವ ಸಮಿತಿಯ ವರದಿಗಳು.
3. ಅರ್ಜಿಗಳ ಸಮಿತಿಯ ಕಾರ್ಯವಿಧಾನ ನಿಯಮಗಳು (ಆಂತರಿಕ ಕಾರ್ಯನಿರ್ವಹಣೆ).
4. ಅರ್ಜಿಗಳ ಸಮಿತಿಯಲ್ಲಿ ನಾಮನಿರ್ದೇಶನ ಹೊಂದಿರುವ ಅಧ್ಯಕ್ಷರು ಹಾಗೂ ಸದಸ್ಯರುಗಳ ಹೆಸರುಗಳು.
5. ಸಮಿತಿ ಶಾಖೆಯಲ್ಲಿ ವ್ಯವಹರಿಸಲಾಗಿರುವ ಎಲ್ಲಾ ಕಡತಗಳು ಹಾಗೂ ಮಾಹಿತಿ ಹಕ್ಕು ಅಧಿನಿಯಮದಡಿ ನೀಡಲಾಗಿರುವ ಮಾಹಿತಿಯ ಕಡತಗಳ ವಿವರ.

**(xv) ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕರ್ತವ್ಯ ವೇಳಾ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು:**

ಅನ್ವಯಿಸುವುದಿಲ್ಲ.

**(xvi) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತು ಇತರೆ ವಿವರಗಳು:**

| ಕ್ರ. ಸಂ. | ಹೆಸರು ಮತ್ತು ಪದನಾಮ<br>ಶ್ರೀಮತಿ/ಶ್ರೀಯುತರುಗಳಾದ: | | ವಿಳಾಸ |
|---|---|---|---|
| 1. | ವಸುಂದರದೇವಿ.ಸಿ.<br>ಉಪ ಕಾರ್ಯದರ್ಶಿ | ಪ್ರಥಮ ಮೇಲ್ಮನವಿ (ಅಪೀಲು) ಪ್ರಾಧಿಕಾರ | ಕೊಠಡಿ ಸಂಖ್ಯೆ: 27, ನೆಲ ಮಹಡಿ, ಕರ್ನಾಟಕ ವಿಧಾನಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು.<br>ದೂರವಾಣಿ ಸಂಖ್ಯೆ: 22256305<br>ಮೊ.ಸಂಖ್ಯೆ: 6364699913 |
| 2. | ಶೋಭ ಎಸ್.ನಾಯಕ್<br>ಅಧೀನ ಕಾರ್ಯದರ್ಶಿ | ಸಾರ್ವಜನಿಕ ಮಾಹಿತಿ ಅಧಿಕಾರಿ | ಕೊಠಡಿ ಸಂಖ್ಯೆ:149(ಇ), ಮೊದಲನೇ ಮಹಡಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು.<br>ದೂ.ಸಂಖ್ಯೆ:080–22250653<br>ಮೊ.ಸಂಖ್ಯೆ: 9483186506 |
| 3. | ಸುರೇಶ್ ಮಲ್ಲಳ್ಳಿ<br>ಶಾಖಾಧಿಕರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಕೊಠಡಿ ಸಂಖ್ಯೆ: 34, ನೆಲ ಮಹಡಿ, ಕರ್ನಾಟಕ ವಿಧಾನಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು.<br>ದೂರವಾಣಿ ಸಂಖ್ಯೆ: 22353127<br>ಮೊ.ಸಂಖ್ಯೆ: 9449445981 |

****

# ಕರ್ನಾಟಕ ವಿಧಾನಸಭೆ

## ಅರ್ಜಿಗಳ ಸಮಿತಿ

# **ಅನುಬಂಧ–1**

### ಅರ್ಜಿಗಳ ಕುರಿತು ನಿರ್ವಹಿಸಿದ ಕಡತಗಳ ಸಂಖ್ಯೆ ಮತ್ತು ವಿಷಯ

| ಕ್ರ. ಸಂ. | ಕಡತಗಳ ಸಂಖ್ಯೆ | ವಿಷಯ |
|---|---|---|
| 01. | ಕವಿಸಸ/ಅಸ/ಹೊಅ/01/2023 | ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ ಆಸ್ಪತ್ರೆಯಲ್ಲಿನ ಅಸಮರ್ಪಕ ಕಾರ್ಯನಿರ್ವಹಣೆ ಬಗ್ಗೆ. |
| 02. | ಕವಿಸಸ/ಅಸ/ಹೊಅ/02/2023 | ಶ್ರೀರಂಗಪಟ್ಟಣ ತಾಲ್ಲೂಕು, ಕಟ್ಟೇರಿ ಗ್ರಾಮದ ಹೊಸ ಕನ್ನಂಬಾಡಿ ಗ್ರಾಮದಿಂದ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನದ ದ್ವಾರದವರೆಗೆ ರಸ್ತೆ ಹಾಗೂ ಪಾರ್ಕಿಂಗ್ ಸೌಲಭ್ಯ ಕಲ್ಪಿಸುವ ಬಗ್ಗೆ. |
| 03. | ಕವಿಸಸ/ಅಸ/ಹೊಅ/03/2023 | ಯಶವಂತಪುರ ವಿಧಾನಸಭಾ ಕ್ಷೇತ್ರದ ದೊಡ್ಡಬಿದರಕಲ್ಲು ವಾರ್ಡ್ ನಂ.40ರಲ್ಲಿನ ಕುಡಿಯುವ ನೀರಿನ ಸಮಸ್ಯೆ ಕುರಿತು. |
| 04. | ಕವಿಸಸ/ಅಸ/ಹೊಅ/04/2023 | ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕಿನ ಎನ್.ಎಂ.ಡಿ.ಸಿ. ಲಿ.. (ಗಣಿ ಕಂಪನಿ) ದೋಣಿಮಲೆ ಕಂಪನಿಯು (ಭಾರತ ಸರ್ಕಾರ) 'ಸಿ' & 'ಡಿ' ವೃಂದದ ನೇಮಕಾತಿಯಲ್ಲಿ ಸ್ಥಳೀಯರಿಗೆ ಮತ್ತು ಕನ್ನಡಿಗರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವ ಬಗ್ಗೆ. |
| 05. | ಕವಿಸಸ/ಅಸ/ಹೊಅ/05/2023 | ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 'ಪೋಲಿಯೊ ಲಸಿಕೆ' ಕೊರತೆ ಉಂಟಾಗುತ್ತಿರುವ ಬಗ್ಗೆ. |
| 06. | ಕವಿಸಸ/ಅಸ/ಹೊಅ/06/2023 | ಮೈಸೂರು ರಸ್ತೆ ಆರ್.ವಿ. ಇಂಜಿನೀಯರಿಂಗ್ ಕಾಲೇಜು ಎದುರುಗಡೆಯ ರೈಲ್ವೆ ಕೆಳಸೇತುವೆಯಲ್ಲಿ ನೀರು ನಿಲ್ಲದಂತೆ ಸ್ವಯಂಚಾಲಿತ ಪಂಪ್‌ಸೆಟ್ ಅಳವಡಿಸುವ ಬಗ್ಗೆ. |
| 07. | ಕವಿಸಸ/ಅಸ/ಹೊಅ/07/2023 | ಬಂಜಾರ ಭಾಷೆಗೆ ಸಾಂವಿಧಾನಿಕ ಮಾನ್ಯತೆ ಮತ್ತು ಈ ಭಾಷೆಯ ಅಭಿವೃದ್ಧಿಗೆ ಆರ್ಥಿಕ ಸಂಪನ್ಮೂಲಗಳನ್ನು ಒದಗಿಸುವಂತೆ ಕೋರಿರುವ ಬಗ್ಗೆ. |
| 08. | ಕವಿಸಸ/ಅಸ/ಹೊಅ/08/2023 | ಕೆಂಗೇರಿ ಉಪ ನಗರದ ಬಿ.ಡಿ.ಎ. ಆಟದ ಮೈದಾನವನ್ನು ಬಿ.ಡಿ.ಎ. ನಕ್ಷೆಯಲ್ಲಿ ಅಳವಡಿಸುವ ಬಗ್ಗೆ. |
| 09. | ಕವಿಸಸ/ಅಸ/ಹೊಅ/09/2023 | ಕೊಡಗು ಜಿಲ್ಲಾ ಕೇಂದ್ರ ಸ್ಥಾನ ಮಡಿಕೇರಿ ಜಿಲ್ಲಾಡಳಿತ ಭವನದ ಮುಂದೆ ಕಟ್ಟಿರುವ ತಡೆಗೋಡೆ ನೆಲಸಮ ಮಾಡಿ ನವೀನ ತಂತ್ರಜ್ಞಾನದಲ್ಲಿ ನಿರ್ಮಾಣ ಮಾಡುವ ಬಗ್ಗೆ. |
| 10. | ಕವಿಸಸ/ಅಸ/ಹೊಅ/10/2023 | ಪ್ರಧಾನ ಮಂತ್ರಿ ಆವಾಸ್ ಯೋಜನೆ ಸರ್ವರಿಗೂ ಸೂರು ಯೋಜನೆಯಡಿ ಮನೆಯನ್ನು ನಿರ್ಮಿಸುವ ಕುರಿತು. |
| 11. | ಕವಿಸಸ/ಅಸ/ಹೊಅ/11/2023 | ಕಡೂರು ಪುರಸಭೆ ವ್ಯಾಪ್ತಿಯಲ್ಲಿ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಮಂಜೂರಾದ ಮನೆಗಳನ್ನು ನಿರ್ಮಾಣ ಮಾಡದಿರುವ ಕುರಿತು. |
| 12. | ಕವಿಸಸ/ಅಸ/ಹೊಅ/12/2023 | ಲಂಬಾಣಿ ತಾಂಡದ ಜನರಿಗೆ ಅರಣ್ಯ ಸಿಬ್ಬಂದಿ ತೊಂದರೆ ನೀಡುತ್ತಿರುವ ಬಗ್ಗೆ. |

| | | |
|---|---|---|
| 13. | ಕವಿಸಸ/ಅಸ/ಹೊಅ/13/2023 | ಸುಳ್ಯ ತಾಲ್ಲೂಕಿನ ಬಾಳುಗೋಡು ಗ್ರಾಮ ಹಿರಿಯಡ್ಕದ ಕಾಸ್ನಡ್ಕ ಎಂಬಲ್ಲಿ ಹೊಳೆಗೆ ಸೇತುವೆ ನಿರ್ಮಾಣ ಮಾಡುವ ಕುರಿತು. |
| 14. | ಕವಿಸಸ/ಅಸ/ಹೊಅ/14/2023 | ರಾಜ್ಯದ ಎಲ್ಲಾ ಜಿಲ್ಲೆಗಳ, ತಾಲ್ಲೂಕುಗಳ ಹಾಗೂ ಗ್ರಾಮಗಳ ಮಾಹಿತಿಗಳುಳ್ಳ ತಹಲ್‌ಕೃತ ಗೆಜೆಟೀಯರ್‌ಗಳನ್ನು ನಿಯತಕಾಲಿಕವಾಗಿ ಪ್ರಕಟಿಸುವ ಬಗ್ಗೆ. |
| 15. | ಕವಿಸಸ/ಅಸ/ಹೊಅ/15/2023 | ಅರಣ್ಯದ ಕಡಜೀರಗಿ ಹುಳುಗಳ ದಾಳಿಯಿಂದ ಸಾವನ್ನಪ್ಪಿರುವವರಿಗೆ ಪರಿಹಾರ ಒದಗಿಸುವ ಕುರಿತು. |
| 16. | ಕವಿಸಸ/ಅಸ/ಹೊಅ/16/2023 | ಕ್ಯಾನ್ಸರ್‌ನಂತಹ ಮಾರಣಾಂತಿಕ ಹಾಗೂ ಅಸಾಂಕ್ರಾಮಿಕ ಕಾಯಿಲೆಗಳಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳನ್ನು ರಕ್ಷಿಸಲು ತಂಬಾಕು ನಿಯಂತ್ರಣ ಕಾನೂನುಗಳನ್ನು ಬಲಪಡಿಸುವ ಕುರಿತು. |
| 17. | ಕವಿಸಸ/ಅಸ/ಹೊಅ/17/2023 | ಅರಕಲಗೂಡು ತಾಲ್ಲೂಕಿನ ಮುದಗನೂರು ಕಾವಲ್ ಗ್ರಾಮದ ಸರ್ವೆ ನಂ.01ರ ಡೀಮ್ಡ್ ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿ ಗಣಿಗರಿಕೆ ನಡೆಸುತ್ತಿರುವ ಕುರಿತು. |
| 18. | ಕವಿಸಸ/ಅಸ/ಹೊಅ/18/2023 | ಹಿರೇಕೆರೂರು ತಾಲ್ಲೂಕು, ಚಿಕ್ಕೇರೂರು ಗ್ರಾಮದ ಕುಂತಿಗುಡ್ಡ ಸರ್ವೆ ನಂ.271/ಬ ರಲ್ಲಿನ ಸುಮಾರು 22.00 ಎಕರೆ 'ಬ' ಖರಾಬು ಖಾಲಿ ಜಾಗದಲ್ಲಿ ನಿರ್ಮಿಸಿರುವ 180 ಮನೆಗಳಿಗೆ ಹಕ್ಕುಪತ್ರ ಮತ್ತು ಇತರೆ ದಾಖಲಾತಿಗಳನ್ನು ನೀಡುವ ಬಗ್ಗೆ. |
| 19. | ಕವಿಸಸ/ಅಸ/ಹೊಅ/19/2023 | ಕೆಂಗೇರಿ ಹೋಬಳಿಯ ಬಿ.ಎಂ. ಕಾವಲು ಗ್ರಾಮದ ಸರ್ವೆ ನಂ.132ರಲ್ಲಿ ಪೋಡಿ ದುರಸ್ತಿಯಾಗಿ ಹೊಸ ಸರ್ವೆ ನಂಬರ್‌ಗಳ 18.00 ಎಕರೆ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯುವ ಬಗ್ಗೆ. |
| 20. | ಕವಿಸಸ/ಅಸ/ಹೊಅ/20/2023 | ಶಿವಮೊಗ್ಗದ ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ರೋಸ್ಟರ್ ಉಲ್ಲಂಘನೆಯಾಗಿರುವ ಬಗ್ಗೆ. |
| 21. | ಕವಿಸಸ/ಅಸ/ಹೊಅ/21/2023 | ಟಿ.ಜಿ.ಎಸ್. ಸಂಸ್ಥೆಯ ಅವ್ಯವಹಾರಗಳಿಂದಾಗಿ ವಂಚನೆಗೆ ಒಳಗಾದ ಸಾರ್ವಜನಿಕರಿಗೆ ನ್ಯಾಯ ಒದಗಿಸುವ ಬಗ್ಗೆ. |
| 22. | ಕವಿಸಸ/ಅಸ/ಹೊಅ/22/2023 | ಕೆಂಗೇರಿ ಹೋಬಳಿಯ ಮೈಲಸಂದ್ರ ಗ್ರಾಮದಲ್ಲಿಯ ರಾಜಕಾಲುವೆ ಒತ್ತುವರಿ ಮಾಡಿಕೊಂಡು ಅಂಗಡಿಗಳು ಹಾಗೂ ಗೋರಿಗಳನ್ನು ಅಕ್ರಮವಾಗಿ ನಿರ್ಮಿಸಿರುವುದನ್ನು ತೆರವುಗೊಳಿಸುವ ಕುರಿತು. |
| 23. | ಕವಿಸಸ/ಅಸ/ಹೊಅ/23/2023 | ಬೆಂಗಳೂರು ದಕ್ಷಿಣ ತಾಲ್ಲೂಕು, ಪಟ್ಟಣಗೆರೆ ಸರ್ವೆ ನಂ.10ರ 4.00 ಎಕರೆ ಜಮೀನಿಗೆ ವಿಶೇಷ ಜಿಲ್ಲಾಧಿಕಾರಿಗಳು ನೀಡಿರುವ ನೋಟಿಸ್ ವಜಾಗೊಳಿಸುವ ಬಗ್ಗೆ. |
| 24. | ಕವಿಸಸ/ಅಸ/ಹೊಅ/24/2023 | ಮೂಡಬಿದರೆ ತಾಲ್ಲೂಕು, ಎಕ್ಕಾರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಡಗ ಎಕ್ಕಾರು ಗ್ರಾಮದ ಅರಸುಲ ಪದವು ಎಂಬಲ್ಲಿ ಸರ್ಕಾರಿ ಭೂಮಿಯನ್ನು ಅನಧಿಕೃತವಾಗಿ ಒತ್ತುವರಿ ಮಾಡಿರುವುದನ್ನು ತೆರವುಗೊಳಿಸುವ ಬಗ್ಗೆ. |

| | | |
|---|---|---|
| 25. | ಕವಿಸಸ/ಅಸ/ಹೊಅ/25/2023 | ಸೋಂಪುರ ಹೋಬಳಿ ಎಜುಕೇಷನ್ ಸೊಸೈಟಿ(ರಿ) ಸಿ.ವಿ.ಜಿ. ಶಾಲೆ ನಡೆಸಲು ಕ್ರಯಕ್ಕೆ ಪಡೆದಿರುವ ಸೋಂಪುರ ಸರ್ವೇ ನಂ.98/2ರ 3.27 ಎಕರೆ, ಸರ್ವೇ ನಂ.99ರ 3.27 ಎಕರೆ ಹಾಗೂ ಸರ್ವೇ ನಂ.5/2ರ 1.29 ಗುಂಟೆ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯುವ ಬಗ್ಗೆ. |
| 26. | ಕವಿಸಸ/ಅಸ/ಹೊಅ/26/2023 | ಕೌಟುಂಬಿಕ ಕಲಹ, ಭಾರತ ದೇಶದ ಆಧ್ಯಾತ್ಮಿಕತೆ, ಭ್ರಷ್ಟಮುಕ್ತ ಆಡಳಿತ ಕೊಟ್ಟಿದ್ದಕ್ಕೆ ಸಂಬಂಧಿಕರಿಂದಲೆ ಜೀವನಪರ್ಯಂತ ಮಾನಸಿಕ, ಆರ್ಥಿಕ ಚಿತ್ರಹಿಂಸೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ಕುರಿತು. |
| 27. | ಕವಿಸಸ/ಅಸ/ಹೊಅ/27/2023 | ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಾಯಕರು ಮತ್ತು ಗಣಕ ನಿರ್ವಾಹಕರ ಹುದ್ದೆಗಳ ನೇಮಕಾತಿಯಲ್ಲಿ ನಿಯಮಾವಳಿಗಳನ್ನು ಪಾಲಿಸದೆ ಭ್ರಷ್ಟಾಚಾರ ನಡೆಸಿರುವುದರಿಂದ ವಿಧಿ-ವಿಜ್ಞಾನ ಪ್ರಯೋಗಾಲಯದ ಮುಖಾಂತರ ತನಿಖೆ ನಡೆಸುವ ಬಗ್ಗೆ. |
| 28. | ಕವಿಸಸ/ಅಸ/ಹೊಅ/28/2023 | ಪ್ರಸ್ತುತ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ಪೊಲೀಸ್ ಇಲಾಖೆಯಲ್ಲಿ ಮುಂಬಡ್ತಿ ನೀಡುವ ಕುರಿತು. |
| 29. | ಕವಿಸಸ/ಅಸ/ಹೊಅ/29/2023 | ಹುಬ್ಬಳ್ಳಿ ತಾಲ್ಲೂಕು ರೈತ ಸಂಘದ ಆಡಳಿತ ಮಂಡಳಿಯನ್ನು ಅಮಾನತು ಮಾಡುವ ಕುರಿತು. |
| 30. | ಕವಿಸಸ/ಅಸ/ಹೊಅ/30/2023 | ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ ಧಾರವಾಡ ವಾರ್ಡ್ ನಂ.12, ಹಳಿಯಾಳ ರಸ್ತೆ, ತುಂಗಭದ್ರಾ ಕಾಲನಿ, 1ನೇ ಕ್ರಾಸ್‌ನಲ್ಲಿ ಸುಮಾರು 28 ವರ್ಷಗಳಿಂದ ಮಳೆಯಿಂದಾಗುವ ನೆರೆಹಾವಳಿ ಸಮಸ್ಯೆ, ಉದ್ಯಾನವನ ಸರ್ವೇ ನಂ.101/ಡ,ಪ್ಲಾಟ್ ನಂ.5, ಅಭಿವೃದ್ಧಿಯಾಗದಿರುವುದು ಹಾಗೂ ಪ್ರತಿನಿತ್ಯ ನೀರಿನ ಸೌಲಭ್ಯ ಒದಗಿಸುವ ಕುರಿತು. |
| 31. | ಕವಿಸಸ/ಅಸ/ಹೊಅ/31/2023 | ಭಾರತದ ಉದಯೋನ್ಮುಖ ಎಲೆಕ್ಟ್ರಾನಿಕ್ ಉದ್ಯಮಗಳು ಹೊಸ ವಿನ್ಯಾಸ, ಹೊಸ ಆಲೋಚನೆ ಹಾಗೂ ಹೊಸ ಉತ್ಪನ್ನಗಳಿಗೆ ವಿನಿಯೋಗಿಸುತ್ತಿರುವ ನಿಧಿಯ ದುರ್ಬಳಕೆ ಬಗ್ಗೆ. |
| 32. | ಕವಿಸಸ/ಅಸ/ಹೊಅ/32/2023 | ಬೆಂಗಳೂರಿನ ಸಿವಿಲ್ ನ್ಯಾಯಾಧೀಶರೊಬ್ಬರಿಂದ ಕಿರುಕುಳ ಮತ್ತು ಜೀವ ಬೆದರಿಕೆ ಇರುವ ಕುರಿತು. |
| 33. | ಕವಿಸಸ/ಅಸ/ಹೊಅ/33/2023 | ಹೆಮ್ಮಿಗೆಪುರ, ಬಿಬಿಎಂಪಿ ವಾರ್ಡ್ ನಂ.198, ಪಟ್ಟಣಗೆರೆ, ರಾಜರಾಜೇಶ್ವರಿನಗರ BHEL 2ನೇ ಹಂತ ಬಡಾವಣೆಯ 654 ಖಾತಾಗಳನ್ನು ಮರು ಸ್ಥಾಪನೆ ಮಾಡುವ ಬಗ್ಗೆ. |
| 34. | ಕವಿಸಸ/ಅಸ/ಹೊಅ/34/2023 | ಪದವಿ ಪೂರ್ವ ಶಿಕ್ಷಣ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ವಿಕಲಚೇತನರ ನೇಮಕಾತಿ ಪ್ರಕ್ರಿಯೆಯಲ್ಲಿ ಕನಿಷ್ಠ ಶೇ.50 ಅಂಕಗಳನ್ನು ನಿಗದಿಪಡಿಸವ ಬಗ್ಗೆ.<br><br>ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಶಿಕ್ಷಕರ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಹತೆಯಲ್ಲಿ ಶೇ.5ರಷ್ಟು ವಿನಾಯಿತಿ ನೀಡುವ ಬಗ್ಗೆ. |

| | | |
|---|---|---|
| 35. | ಕವಿಸಸ/ಅಸ/ಹೊಅ/35/2023 | ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ವಳಗೇರಹಳ್ಳಿ ಗ್ರಾಮದ ಸರ್ವೇ ನಂ.113ರ 2.00 ಎಕರೆ ಜಮೀನನ್ನು ಪ್ರಾಧಿಕಾರ ವಶಪಡಿಸಿಕೊಳ್ಳುವ ಕುರಿತು. |
| 36. | ಕವಿಸಸ/ಅಸ/ಹೊಅ/36/2023 | ಜಲಸಂಪನ್ಮೂಲ ಇಲಾಖೆ ಹಾಗೂ ಎಲ್ಲಾ ನಿಗಮಗಳಲ್ಲಿನ ಗುತ್ತಿಗೆ/ಹೊರಗುತ್ತಿಗೆ ನೌಕರರನ್ನು ಖಾಯಂಗೊಳಿಸಿ ಆದೇಶ ನೀಡುವ ಬಗ್ಗೆ. |
| 37. | ಕವಿಸಸ/ಅಸ/ಹೊಅ/37/2023 | ಹೊರಗುತ್ತಿಗೆ ಸಿಬ್ಬಂದಿಗಳಿಗೆ ವೇತನ ನೀಡುವಾಗ ತುಂಬಾ ವಿಳಂಬವಾಗುತ್ತಿರುವ ಬಗ್ಗೆ. |
| 38. | ಕವಿಸಸ/ಅಸ/ಹೊಅ/38/2023 | ವಯೋ ನಿವೃತ್ತಿ ನಂತರ ದೊರೆಯಬೇಕಾದ ಗ್ರಾಚ್ಯುಯಿಟಿ ಹಾಗೂ ಯು.ಜಿ.ಸಿ. ವೇತನ ಶ್ರೇಣಿಯ ವೇತನ ಸೌಲಭ್ಯಗಳ ಬಾಕಿ ಮೊತ್ತವನ್ನು ತಡೆಹಿಡಿದಿರುವ ಬಗ್ಗೆ. |
| 39. | ಕವಿಸಸ/ಅಸ/ಹೊಅ/39/2023 | ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೇಕೆರೆ ಹೋಬಳಿ, ಗಂಗೇನಹಳ್ಳಿ ಗ್ರಾಮದ ಸರ್ವೇ ನಂ. 130ರ 77.05 ಎಕರೆ ಸರ್ಕಾರಿ ಜಮೀನನ್ನು ಬಗರ್ ಹುಕುಂ ಸಾಗುವಳಿ ಅರ್ಜಿ ಮೂಲಕ ಫಲಾನುಭವಿಗಳಿಗೆ ಮಂಜೂರು ಮಾಡುವ ಬಗ್ಗೆ |
| 40. | ಕವಿಸಸ/ಅಸ/ಹೊಅ/40/2023 | ಬೆಂಗಳೂರು ದಕ್ಷಿಣ ತಾಲ್ಲೂಕು ಸಿಂಗಸಂದ್ರ, ಹಾಗೂ ಎಇಸಿಎಸ್ ಬಡಾವಣೆ 'ಎ' ಬ್ಲಾಕ್ ವ್ಯಾಪ್ತಿಯಲ್ಲಿರುವ ಸರ್ವೇ ನಂ.20ರ ಗುಂಡುತೋಪು ಜಮೀನನ್ನು ಸರ್ಕಾರಿ ಪಾಠ ಶಾಲೆಗೆ ಕಾಯ್ದಿರಿಸುವ ಬಗ್ಗೆ. |
| 41. | ಕವಿಸಸ/ಅಸ/ಹೊಅ/41/2023 | ಬೆಂಗಳೂರು ಗಿಡದಕೊನೇನಹಳ್ಳಿ ಸರ್ವೇ ನಂ.38 ಮತ್ತು 39ರಲ್ಲಿ ಕಟ್ಟಿಕೊಂಡಿರುವ ಮನೆಗಳಿಗೆ ಖಾತಾ, ಕಂದಾಯ ಹಾಗೂ ಹಕ್ಕುಪತ್ರಗಳನ್ನು ನೀಡುವ ಕುರಿತು. |
| 42. | ಕವಿಸಸ/ಅಸ/ಹೊಅ/42/2023 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ಅನುದಾನ ರಹಿತವಾಗಿ ನಡೆಸುತ್ತಿರುವ ಶಾಲಾ-ಕಾಲೇಜುಗಳನ್ನು ಸರ್ಕಾರದ ಅನುದಾನ ಸಂಹಿತೆಗೆ ಒಳಪಡಿಸುವ ಬಗ್ಗೆ. |
| 43. | ಕವಿಸಸ/ಅಸ/ಹೊಅ/43/2023 | ಹಿರೇಕೆರೂರು ಕ್ಷೇತ್ರದ ರಟ್ಟಿಹಳ್ಳಿ ತಾಲ್ಲೂಕು, ನಾಗವಂದ ಗ್ರಾಮದ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡುವ ಬಗ್ಗೆ. |
| 44. | ಕವಿಸಸ/ಅಸ/ಹೊಅ/44/2023 | ಬೈಲಹೊಂಗಲ ತಾಲ್ಲೂಕು, ನಯಾನಗರ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢ ಶಾಲೆ ವಿದ್ಯಾರ್ಥಿಗಳಿಗೆ ಕುಡಿಯುವ ನೀರು ಪೂರೈಸಲು ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸುವ ಬಗ್ಗೆ. |
| 45. | ಕವಿಸಸ/ಅಸ/ಹೊಅ/45/2023 | ಬೈಲಹೊಂಗಲ ನಗರದಲ್ಲಿರುವ ಗ್ರಂಥಾಲಯ ಕಟ್ಟಡವನ್ನು ವಿಸ್ತರಿಸಿ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ನಿರ್ಮಾಣ ಮಾಡುವ ಬಗ್ಗೆ. |
| 46. | ಕವಿಸಸ/ಅಸ/ಹೊಅ/46/2023 | ಸವದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ ಸೊಗಲ ಸೋಮೇಶ್ವರ ಪ್ರದೇಶದಲ್ಲಿ ಸೌರ ಬೀದಿ ದೀಪಗಳ ಅನುಷ್ಠಾನ ಮಾಡುವ ಕುರಿತು. |

| | | |
|---|---|---|
| 47. | ಕವಿಸಸ/ಅಸ/ಹೊಅ/47/2023 | ಬೈಲಹೊಂಗಲ ನಗರದಲ್ಲಿರುವ ಬಸವ ಮಂಟಪ ಕಟ್ಟಡಕ್ಕೆ ಹೋಗಲು ಗಟಾರ ಮತ್ತು ಸಿಮೆಂಟ್ ರಸ್ತೆ ನಿರ್ಮಿಸಲು ರೂ.5.00ಲಕ್ಷ ಅನುದಾನ ಬಿಡುಗಡೆ ಮಾಡುವ ಬಗ್ಗೆ. |
| 48. | ಕವಿಸಸ/ಅಸ/ಹೊಅ/48/2023 | ಮಂಗಳೂರು ಉತ್ತರ ವಲಯದ ದ.ಕ.ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರೌಢ ಶಾಲಾ ವಿಭಾಗ ತೆರೆಯಲು ಮಧ್ಯ ಗ್ರಾಮದ ಸರ್ವೆ ನಂ.40/4ರ 4.00 ಎಕರೆ ಸರ್ಕಾರಿ ಜಮೀನನ್ನು ಮಂಜೂರು ಮಾಡುವ ಬಗ್ಗೆ. |
| 49. | ಕವಿಸಸ/ಅಸ/ಹೊಅ/49/2023 | ಹಾವೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ನದಿಗಳು, ನಾಲೆಗಳು, ಕೆರೆಗಳು ಹಾಗೂ ಜಲಸಂಪನ್ಮೂಲತೆಗಾಗಿ ಹೂಳು ತೆಗೆಸುವ ಬಗ್ಗೆ. |
| 50. | ಕವಿಸಸ/ಅಸ/ಹೊಅ/50/2023 | ಬೈಲಹೊಂಗಲ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸವದತ್ತಿ ತಾಲ್ಲೂಕಿನ ಅಸುಂಡಿ ಗ್ರಾಮದ ಶ್ರೀ ಗ್ರಾಮದೇವಿ ದೇವಸ್ಥಾನದ ಮುಂಭಾಗದಲ್ಲಿ ನೆಲಹಾಸು ನಿರ್ಮಿಸುವ ಬಗ್ಗೆ. |
| 51. | ಕವಿಸಸ/ಅಸ/ಹೊಅ/51/2023 | ಪ್ರಾಥಮಿಕ, ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ದೈಹಿಕ ಶಿಕ್ಷಣ ಶಿಕ್ಷಕರ ನೇಮಕಾತಿ ಮಾಡುವ ಕುರಿತು. |
| 52. | ಕವಿಸಸ/ಅಸ/ಹೊಅ/52/2023 | ಕುಂಬಳಗೋಡು ಗ್ರಾಮದ ಎರಡು ಬದಿ ರಾಷ್ಟ್ರೀಯ ಹೆದ್ದಾರಿ – 275ರ ಚರಂಡಿ ಹಾಗೂ ರಸ್ತೆ ಸಮಸ್ಯೆಗಳನ್ನು ಪರಿಹರಿಸುವ ಕುರಿತು. |
| 53. | ಕವಿಸಸ/ಅಸ/ಹೊಅ/53/2023 | ನೂತನವಾಗಿ ಆರಂಭಿಸಿರುವ ಚಾಮರಾಜನಗರ ವಿಶ್ವ ವಿದ್ಯಾನಿಲಯಕ್ಕೆ ಅಗತ್ಯವಾದ ಎಲ್ಲಾ ಕಾನೂನಾತ್ಮಕ ಮಾನ್ಯತೆಗಳನ್ನು ನೀಡಿ, ಮೂಲ ಸೌಕರ್ಯಗಳನ್ನು ಒದಗಿಸುವ ಕುರಿತು. |
| 54. | ಕವಿಸಸ/ಅಸ/ಹೊಅ/54/2024 | ಎ.ಜಿ.ಎಸ್. ಬಡಾವಣೆಗೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಒದಗಿಸುವ ಕುರಿತು. |
| 55. | ಕವಿಸಸ/ಅಸ/ಹೊಅ/55/2024 | ಹೈದ್ರಾಬಾದ್ ಕರ್ನಾಟಕ ಭಾಗದ 371ಜೆ ಮೀಸಲಾತಿ ಪ್ರಮಾಣ ಪತ್ರ ನೀಡಲು ಕಲಬುರಗಿ ಜಿಲ್ಲೆಯ ವಿಭಾಗಾಧಿಕಾರಿಗಳು ನಿರಾಕರಿಸುತ್ತಿರುವ ಬಗ್ಗೆ. |
| 56. | ಕವಿಸಸ/ಅಸ/ಹೊಅ/56/2024 | ಶ್ರೀ ರಾಜರಾಜೇಶ್ವರಿ ಬಡಾವಣೆಯ ನಿವೇಶನಗಳಿಗೆ ಬಿ.ಬಿ.ಎಂ.ಪಿ.ಯಿಂದ ಖಾತೆ ಮತ್ತು ನಕ್ಷೆಗಳ ಮಂಜೂರಾತಿಯನ್ನು ಪುನರ್ ಪ್ರಾರಂಭಿಸುವ ಬಗ್ಗೆ. |
| 57. | ಕವಿಸಸ/ಅಸ/ಹೊಅ/57/2024 | ಮಂಚನಬಲೆ ಜಲಾಶಯ ನಿರ್ಮಾಣಕ್ಕಾಗಿ ಅವ್ವೇರಹಳ್ಳಿ ಗ್ರಾಮವನ್ನು ಸ್ಥಳಾಂತರಿಸಿ ಕೋಲೂರು ಸರ್ವೆ ನಂ.48, 50, 56, 57ರಲ್ಲಿ ಪುನರ್ವಸತಿ ಕಲ್ಪಿಸಿ ಹಂಚಿಕೆಯಾದ ಕೃಷಿ ಜಮೀನನ್ನು ಪೋಡಿ ಮಾಡಿಕೊಡುವ ಬಗ್ಗೆ. |
| 58. | ಕವಿಸಸ/ಅಸ/ಹೊಅ/58/2024 | ಕರ್ನಾಟಕ ರಾಜ್ಯದ ಸರ್ಕಾರಿ ಆಡಳಿತ ವ್ಯವಸ್ಥೆಯನ್ನು ನಾಗರಿಕ ಸ್ನೇಹಿಯಾಗಿ ಸುಧಾರಿಸುವ ಕುರಿತು. |

| | | |
|---|---|---|
| 59. | ಕವಿಸಸ/ಅಸ/ಹೊಅ/59/2024 | ಬೆಂಗಳೂರಿನ ವೃಷಭಾವತಿ ನದಿಯನ್ನು ಕುಡಿಯುವ ನೀರಿಗೆ ಯೋಗ್ಯವಾಗುವಂತೆ ಶುದ್ಧೀಕರಣಗೊಳಿಸುವ ಕುರಿತು. |
| 60. | ಕವಿಸಸ/ಅಸ/ಹೊಅ/60/2024 | ಮೈಸೂರು ತಾಲ್ಲೂಕು, ವರುಣ ಹೋಬಳಿ, ಉತ್ತನಹಳ್ಳಿ ಗ್ರಾಮದ ಸರ್ವೇ ನಂ. 103/2, 103/2ಬಿ ಹಾಗೂ 103/2ಸಿ ರಲ್ಲಿನ ಜಮೀನುಗಳಿಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕ್ರಯ ಮಾಡಿರುವುದನ್ನು ವಜಾಗೊಳಿಸುವ ಬಗ್ಗೆ. |
| 61. | ಕವಿಸಸ/ಅಸ/ಹೊಅ/61/2024 | ರಾಜ್ಯದಲ್ಲಿರುವ ಬಂಜಾರ/ಲಂಬಾಣಿ ಜನ ವಸತಿಗಳಾದ 'ತಾಂಡಾ'ಗಳ ಸರ್ವಾಭ್ಯುದಯಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕುರಿತು. |
| 62. | ಕವಿಸಸ/ಅಸ/ಹೊಅ/62/2024 | ಚನ್ನಪಟ್ಟಣ ತಾಲ್ಲೂಕು, ತಿಮ್ಮಸಂದ್ರ ಗ್ರಾಮದ ಸರ್ವೆ ನಂ.117/2 ರಿಂದ 128ರವರೆಗಿನ ಜಮೀನುಗಳಿಗೆ ಸಾರ್ವಜನಿಕರು, ರೈತರು ಹಾಗೂ ದನಕರುಗಳು ಸಂಚರಿಸಲು ರಸ್ತೆ ನಿರ್ಮಾಣ ಮಾಡಿಕೊಡುವ ಕುರಿತು. |
| 63. | ಕವಿಸಸ/ಅಸ/ಹೊಅ/63/2024 | ಅಂಧ್ರಹಳ್ಳಿ ಕೆರೆ ಹಾಗೂ ಪಾರ್ಕ್‌ಗೆ ಬರುತ್ತಿರುವ ಸ್ಯಾನಿಟರಿ ನೀರನ್ನು ತಡೆಯುವುದು ಹಾಗೂ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ಬಗ್ಗೆ. |
| 64. | ಕವಿಸಸ/ಅಸ/ಹೊಅ/64/2024 | ಮೈಸೂರು ಮಹಾರಾಜರು ನೀಡಿರುವ ಉಂಬಳಿ(ಇನಾಂ ಡೀಡ್) ಪತ್ರದ ರೀತ್ಯಾ ಸರ್ವೇ ನಂ.2, ರಾಜಮಹಲ್ ಗ್ರಾಮ, ಸಿ.ಟಿ.ಎಸ್. ಸಂಖ್ಯೆ: 1169ರ ಆಸ್ತಿ ಖಾತಾ ಮಾಡುವ ಕುರಿತು. |
| 65. | ಕವಿಸಸ/ಅಸ/ಹೊಅ/65/2024 | ಐಟಿಐ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ದೂರವಾಣಿನಗರ, ಬೆಂಗಳೂರು, ಇದರಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ. |
| 66. | ಕವಿಸಸ/ಅಸ/ಹೊಅ/66/2024 | ಕುಣಿಗಲ್ ಟೌನ್‌ನಲ್ಲಿರುವ ಸೆಂಟ್ರಲ್ ಮಜ್ಲಿಸ್ ಎ – ಶೂರರವರು ಮಾಡಿರುವ ಅವ್ಯವಹಾರಗಳು ಹಾಗೂ ನ್ಯಾಯಾಲಯದ ಆದೇಶದಂತೆ ಹಳೇ ಬಾಡಿಗೆದಾರರಿಗೆ ಅಂಗಡಿ ಮಳಿಗೆಗಳನ್ನು ಹೊಸದಾಗಿ ಮಂಜೂರು ಮಾಡುವ ಬಗ್ಗೆ. |
| 67. | ಕವಿಸಸ/ಅಸ/ಹೊಅ/67/2024 | ರೋಷನ್‌ನಗರ ಮತ್ತು ದೇವರಚಿಕ್ಕನಹಳ್ಳಿ ಕೊಳಗೇರಿ ನಿವಾಸಿಗಳಿಗಾಗಿ ನಿರ್ಮಾಣ ಗೊಳ್ಳುತ್ತಿರುವ ಬಹುಮಹಡಿ ಕಟ್ಟಡ ವಸತಿ ಸಂಕೀರ್ಣ ಪೂರ್ಣಗೊಳಿಸುವ ಕುರಿತು |
| 68. | ಕವಿಸಸ/ಅಸ/ಹೊಅ/68/2024 | ಆಗಸ್ಟ್, 2011 ರಿಂದ ಜುಲೈ, 2013ರ ಅವಧಿಯಲ್ಲಿ ಐ.ಟಿ.ಐ. ತರಬೇತಿ ಹೊಂದಿರುವ ಅಭ್ಯರ್ಥಿಗಳ ಅಂಕಪಟ್ಟಿ ನೈಜತೆ ಕುರಿತು |
| 69. | ಕವಿಸಸ/ಅಸ/ಹೊಅ/69/2024 | ಹಾವೇರಿ ನಗರವನ್ನು 'ಸ್ಮಾರ್ಟ್‌ಸಿಟಿ' ಹಾಗೂ 'ಸೇಫ್ ಸಿಟಿ' ಯೋಜನೆಯಡಿಯಲ್ಲಿ ಸೇರ್ಪಡಿಸಿ ಅಭಿವೃದ್ಧಿಪಡಿಸುವ ಕುರಿತು |
| 70. | ಕವಿಸಸ/ಅಸ/ಹೊಅ/70/2024 | ರಾಜ್ಯದ ಪ್ರತಿ ಗ್ರಾಮದಲ್ಲಿರುವ ಪ್ರತಿ ಸರ್ವೇ ನಂಬರ್ ಜಮೀನುಗಳಿಗೆ ಹೋಗಿ–ಬರಲು ಕಾಲುದಾರಿ/ಬಂಡಿದಾರಿ/ ಪಾಣಾದಿಗಳು/ವಾಹನ ದಾರಿಗಳನ್ನು ಭೂಮಾಪನ ಮಾಡಿ 'ನಮ್ಮ ಹೊಲ–ನಮ್ಮ ರಸ್ತೆ' ಅಥವಾ ಯಾವುದಾದರೊಂದು ಯೋಜನೆ ಮೂಲಕ 25' ಅಡಿ ಅಗಲದ ಸಿ.ಸಿ./ಟಾರ್ ರಸ್ತೆ ನಿರ್ಮಿಸುವ ಕುರಿತು |

| | | |
|---|---|---|
| 71. | ಕವಿಸಸ/ಅಸ/ಹೊಅ/71/2024 | 2023–24ನೇ ಸಾಲಿನಲ್ಲಿ ಅತೀ ಕಡಿಮೆ ಮಳೆಯಾಗಿರುವುದರಿಂದ ಜನರಿಗೆ ಶುದ್ಧವಾದ ಕುಡಿಯುವ ನೀರು, ದನಗಳಿಗೆ ಮೇವು, ರೈತರಿಗೆ ಪರಿಹಾರದ ವ್ಯವಸ್ಥೆಗಳನ್ನು ಮಾಡಲು ಕ್ರಮಕೈಗೊಳ್ಳುವ ಕುರಿತು. |
| 72. | ಕವಿಸಸ/ಅಸ/ಹೊಅ/72/2024 | ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಸಜ್ಜೇಪಾಳ್ಯ ಸರ್ವೆ ನಂ.8,9,10,13,14 ಮತ್ತು ಮಾಳಗಾಳ್ ಗ್ರಾಮದ ಸರ್ವೇ ನಂ.43 ಮತ್ತು 44ರಲ್ಲಿನ ಜಮೀನುಗಳನ್ನು ದಾನಪತ್ರದಂತೆ ಕೃಷ್ಣಪ್ಪ ರಂಗಮ್ಮ ಶಿಕ್ಷಣ ಟ್ರಸ್ಟ (ರಿ) ಹೆಸರಿಗೆ ಖಾತೆ ಮರುಸ್ಥಾಪಿಸುವ ಬಗ್ಗೆ. |
| 73. | ಕವಿಸಸ/ಅಸ/ಹೊಅ/73/2024 | ಸುಪ್ರಸಿದ್ಧ ದೇವಲ ಗಾಣಗಾಪುರದ ದತ್ತಾತ್ರೇಯ ಸ್ವಾಮಿ ದೇವಸ್ಥಾನಕ್ಕೆ ರಸ್ತೆ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ. |
| 74. | ಕವಿಸಸ/ಅಸ/ಹೊಅ/74/2024 | ಹಿರೇಕೆರೂರು ವಿಧಾನಸಭಾ ಕ್ಷೇತ್ರದ ರಟ್ಟಿಹಳ್ಳಿ ತಾಲ್ಲೂಕಿನ ಕಡೂರು ಗ್ರಾಮ ಪಂಚಾಯಿತಿಯ ರಿಸನಂ.223/ಬ 224ರಲ್ಲಿ ನಿರ್ಮಿಸಿರುವ ಮನೆಗಳಿಗೆ ಅಧಿಕೃತ ಪಟ್ಟಾ ಹಾಗೂ 11ಇ ಸ್ಕೆಚ್ ಮಾಡುವ ಕುರಿತು. |
| 75. | ಕವಿಸಸ/ಅಸ/ಹೊಅ/75/2024 | ರಾಣಿಬೆನ್ನೂರು ತಾಲ್ಲೂಕಿನ ಕೊಡಿಯಾಲ ಗ್ರಾಮದ ದೊಡ್ಡ ಚರಂಡಿ ಮೂಲಕ ಹರಿಯುವ ಅತ್ಯಂತ ಕೊಳಕಾದ ಹಾಗೂ ದುರ್ವಾಸನೆಯುಕ್ತ ನೀರನ್ನು ಶುದ್ದೀಕರಿಸಲು ಆಧುನಿಕ ತಂತ್ರಜ್ಞಾನದ ಒಳಚರಂಡಿ ಸಂಸ್ಕರಣಾ ಘಟಕ ಸ್ಥಾಪಿಸುವ ಬಗ್ಗೆ. |
| 76. | ಕವಿಸಸ/ಅಸ/ಹೊಅ/76/2024 | ಮೈಸೂರು ತಾಲ್ಲೂಕು, ಹೆಬ್ಬಾಳು ಗ್ರಾಮದ ಸರ್ವೇ ನಂ.155/1 ಮತ್ತು 159/1ರ ಯುಎಲ್‌ಸಿ ಕಾಯ್ದೆಗೊಳಪಟ್ಟ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಿಸುತ್ತಿರುವ ಕಟ್ಟಡವನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯುವ ಬಗ್ಗೆ. |
| 77. | ಕವಿಸಸ/ಅಸ/ಹೊಅ/77/2024 | ಪರಿಶಿಷ್ಟ ಜನಾಂಗಕ್ಕೆ ಸೇರಿದ ಭೋವಿ ಜನಾಂಗದವರು ನಡೆಸುತ್ತಿರುವ ಕಲ್ಲು ಚಪ್ಪಡೆ ಮತ್ತು ಕಲ್ಲು 8ಒಡೆಯುವ ಕೆಲಸಕ್ಕೆ ನಿಯಮ 3ಎಫ್ ಅಡಿ ಎನ್.ಓ.ಸಿ. ನೀಡಲು ಕ್ರಮಕೈಗೊಳ್ಳುವ ಕುರಿತು. |
| 78. | ಕವಿಸಸ/ಅಸ/ಹೊಅ/78/2024 | ಅರಣ್ಯಾಧಿಕಾರಿಗಳು ಸುಂಕದಕಟ್ಟೆ ಗ್ರಾಮದ ಸರ್ವೇ ನಂ.37 ಹಾಗೂ ನೆಟ್ಟಿಗರ ಗ್ರಾಮದ ಸರ್ವೇ ನಂ.42ರ ರೈತರಿಗೆ ತೊಂದರೆ ನೀಡುತ್ತಿರುವ ಕುರಿತು. |

## ಶಾಖೆಗೆ ಸಂಬಂಧಿಸಿದಂತೆ ನಿರ್ವಹಿಸಿದ ಕಡತಗಳ ಸಂಖ್ಯೆ ಮತ್ತು ವಿಷಯ

| ಕ್ರ. ಸಂ. | ಕಡತಗಳ ಸಂಖ್ಯೆ | ವಿಷಯ |
|---|---|---|
| 01. | ಕವಿಸಸ/ಅಸ/01/ಕೊಹಂ2023 | ಅರ್ಜಿಗಳ ಸಮಿತಿ ಶಾಖೆಗೆ ವಿಧಾನ ಸೌಧದಲ್ಲಿ ಕೊಠಡಿ ಹಂಚಿಕೆ ಮಾಡಲು ಕ್ರಮಕೈಗೊಳ್ಳುವ ಬಗ್ಗೆ. |
| 02. | ಕವಿಸಸ/ಅಸ/ಸೂಪ/02/2023-24 | 2023-24ನೇ ಸಾಲಿನ ಅರ್ಜಿಗಳ ಸಮಿತಿ ಸಭೆಯ ಸೂಚನಾ ಪತ್ರ ಕಡತ. |
| 03. | ಕವಿಸಸ/ಅಸ/ಲಘುಉ/03/2023-24 | ಅರ್ಜಿಗಳ ಸಮಿತಿ ಸಭೆಗಳಿಗೆ ಲಘು ಉಪಹಾರ ಸರಬರಾಜು ಪಡೆದ ಬಿಲ್ ಮೊತ್ತ ಪಾವತಿಸುವ ಬಗ್ಗೆ. |
| 04. | ಕವಿಸಸ/ಅಸ/ವಾವತಮಾ/04/2023-24 | 2022-23ನೇ ಸಾಲಿನ ವಾರ್ಷಿಕ ವರದಿ ತಯಾರಿಕೆಗೆ ಮಾಹಿತಿ ಒದಗಿಸುವ ಬಗ್ಗೆ. |
| 05. | ಕವಿಸಸ/ಅಸ/ಅ.ಚರ್ಚೆ/05/2023-24 | ವಿಧಾನಸಭೆಯ ಅರ್ಜಿಗಳ ಸಮಿತಿ ಶಾಖೆಯಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಸನ್ಮಾನ್ಯ ಸಭಾಧ್ಯಕ್ಷರ ಅನುಮೋದನೆ ಪಡೆದು ಚರ್ಚಿಸುವ ಬಗ್ಗೆ. |
| 06. | ಕವಿಸಸ/ಅಸ/ಸಹೊಸಭೆ/06/2023-24 | ಸದನದ ಆವರಣಗಳ ಹೊರಗೆ ಸಮಿತಿಯ ಉಪವೇಶನ ನಡೆಸಲು ಅನುಮತಿ ನೀಡುವ ಬಗ್ಗೆ. |
| 07. | ಕವಿಸಸ/ಅಸ/ಉಪಸ/07/2023 | ತಂಬಾಕು ನಿರ್ಮೂಲನೆ ಬಗ್ಗೆ ಉಪ ಸಮಿತಿ ರಚಿಸುವ ಬಗ್ಗೆ. |
| 08. | ಕವಿಸಸ/ಅಸ/ಉಪಸ/ಸೂಪ/08/2024 | ಅರ್ಜಿಗಳ ಸಮಿತಿಯ ಉಪ ಸಮಿತಿಯ ಸೂಚನಾ ಪತ್ರ ಕಡತ. |
| 09. | ಕವಿಸಸ/ಅಸ/ಮಾಹಅ/09/2024 | ಅರ್ಜಿಗಳ ಸಮಿತಿಯಿಂದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರಿಗೆ ಬರೆದಿರುವ ಪತ್ರಗಳ ದೃಢೀಕೃತ ಪ್ರತಿ ಒದಗಿಸುವ ಬಗ್ಗೆ. |
| 10. | ಕವಿಸಸ/ಅಸ/ಕೊಹಂ/10/2024 | ಅರ್ಜಿಗಳ ಸಮಿತಿ ಶಾಖೆಗೆ ವಿಧಾನ ಸೌಧದ ನೆಲಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 34 ಹಂಚಿಕೆಯಾಗಿರುವ ಬಗ್ಗೆ. |
| 11. | ಕವಿಸಸ/ಅಸ/11/ಮಾಹಗಕೇ/2024 | ಮಾಹಿತಿ ಹಕ್ಕು ಅಧಿನಿಯಮದ ಕಲಂ 4(1)(ಎ) ಮತ್ತು 4(1)(ಬಿ)ರಲ್ಲಿ ಬರುವ ಮಾಹಿತಿಗಳನ್ನು ಗಣಕ ಕೇಂದ್ರಕ್ಕೆ ಒದಗಿಸುವ ಕುರಿತು. |
| 12. | ಕವಿಸಸ/ಅಸ/ಸಗೈಹಾ/12/2024 | ಸಮಿತಿ ಸಭೆಗಳಿಗೆ ಮಾನ್ಯ ಸದಸ್ಯರ ಹಾಜರಾತಿ ಕುರಿತು. |